**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ**

**ಸಿಸಿ ನಂಃ 1788/2021**

ಪಿರ್ಯಾದಿಃ- ಕರ್ನಾಟಕ ಸರ್ಕಾರದ ಪರ
(ಧಾರವಾಡ ವಿದ್ಯಾಗಿರಿ ಆರಕ್ಷಕ ಠಾಣೆ)

-ವಿರುದ್ದ-

ಆರೋಪಿತರುಃ- 1) ವಾಸು ವೆಂಕರೆಡ್ಡಿಯವರ
ವಯಾಃ 65 ವರ್ಷ , ಉಃ ನಿವೃತ್ತ ವ್ಯಕ್ತಿ
ಸಾಃ ನರಗುಂದ, ಗದಗ .

2) ಶ್ರೀನಿವಾಸ ನಿಂಗರೆಡ್ಡಿ ಕಾಮರೆಡ್ಡಿ
ವಯಾಃ 58 ವರ್ಷ , ಉಃ ರೈತ
ಸಾಃ ನರಗುಂದ, ಗದಗ .

3) ಸುನಿತಾ ಶ್ರೀನಿವಾಸ ಕಾಮರೆಡ್ಡಿ
ವಯಾಃ 50 ವರ್ಷ , ಉಃ ಗೃಹಿಣಿ
ಸಾಃ ನರಗುಂದ, ಗದಗ .

**ದೋಷಾರೋಪಣೆ**

ಶ್ರೀ ಮಹೇಶ ಚಂದ್ರಕಾಂತ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ ಆದ ನಾನು ಈ ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಇಡುವ ದೋಷಾರೋಪಣೆಗಳೆಂದರೆ ಃ-

ಮೊದಲನೇಯದಾಗಿ, ದಿನಾಂಕಃ 03-10-2017 ರಂದು ಮಧ್ಯಾಹ್ನ 3-00 ಗಂಟೆಗೆ ಆರೋಪಿತರಾದ ನೀವು, ನಿಮ್ಮ ಸಮಾನ ಮನಸ್ಸಿನಿಂದ ಧಾರವಾಡದ ವಿದ್ಯಾಗಿರಿ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಪಿ ಬಿ ರಸ್ತೆಯಲ್ಲಿ ಬಾಬತ್ ಬೇಕರಿ ಅಂಗಡಿಗೆ ಹೋಗಿ ಫಿರ್ಯಾದಿದಾರ ಎಲ್ಲಿರುತ್ತಾನೆ ಅಂತಾ ಹೇಳುತ್ತಾ ಅಂಗಡಿ ಸೆಟ್ರಸ್ ಅರ್ಧಕ್ಕೆ ಜಗ್ಗಿ ಪಿರ್ಯಾದಿಗೆ ಎಲ್ಲಿಯೂ ಹೋಗದಂತೆ ಅಕ್ರಮ ತಡೆ ಮಾಡಿ **ಭಾರತೀಯ ದಂಡ ಸಂಹಿತೆಯ ಕಲಂ 341 ಸಹಕಲಂ 34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತಿರಿ ?

ಎರಡನೇಯದಾಗಿ, ಅದೇ ದಿನ , ಅದೇ ಸ್ಥಳ  ಮತ್ತು ಅದೇ ಸಮಯದಲ್ಲಿ ಆರೋಪಿತರಾದ ನೀವು, ನಿಮ್ಮ ಸಮಾನ ಉದ್ದೇಶದಿಂದ ಫಿರ್ಯಾದಿಯ ಅಂಗಡಿಗೆ ಬಂದು ಈ ಅಂಗಡಿಯ ಆಸ್ತಿ ನಮ್ಮದಿರುತ್ತದೆ ಇಲ್ಲಿಂದ ಹೊರಗೆ ಹೋಗಿರಿ ಅಂತಾ ಅಲ್ಲಿದ್ದ ಚಾಸಾ-1, 4 , 5 ಹಾಗೂ 6 ನೇ ದವರಿಗೆ ಅವಾಚ್ಯ  ಶಬ್ದಗಳಿಂದ ಬೈದಾಡಿ ಅವಮಾನಪಡಿಸಿ ಆ ಮೂಲಕ ನೀವು  **ಭಾರತೀಯ ದಂಡ ಸಂಹಿತೆಯ ಕಲಂ 504  ಸಹಕಲಂ 34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತೀರಿ ?

ಮೂರನೇಯದಾಗಿ,  ಅದೇ ದಿನ , ಅದೇ ಸ್ದಳ  ಮತ್ತು ಅದೇ ಸಮಯದಲ್ಲಿ ಆರೋಪಿತರಾದ ನೀವು, ನಿಮ್ಮ ಸಮಾನ ಉದ್ದೇಶದಿಂದ ಅಪರಾಧ ಮಾಡುವ ಉದ್ದೇಶದಿಂದ  ಫಿರ್ಯಾದಿಯ ಅಂಗಡಿಗೆ ಅತಿಕ್ರಮ ಪ್ರವೇಶ ಮಾಡಿ ಆ  ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 451 ಸಹಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ?

ನಾಲ್ಕನೇಯದಾಗಿ ಅದೇ ದಿನ , ಅದೇ ಸ್ಥಳ  ಮತ್ತು ಅದೇ ಸಮಯದಲ್ಲಿ ಆರೋಪಿತರಾದ ನೀವು , ನಿಮ್ಮ ಸಮಾನ ಉದ್ದೇಶದಿಂದ, 2 ನೇ ಆರೋಪಿಯಾದ ನೀನು ಫಿರ್ಯಾದುದಾರನಿಗೆ  ಕೈಯಿಂದ ತಿವಿದು ಗಾಯಗೊಳಿಸಿ ಆ ಮೂಲಕ  ನೀವು **ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34** ರಡಿಯಲ್ಲಿನ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಏಸಗಿರುತ್ತೀರಿ ?

ಐದನೇಯದಾಗಿ, ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರಾದ ನೀವು, ನಿಮ್ಮ ಸಮಾನ ಉದ್ದೇಶದಿಂದ ಪಿರ್ಯಾದಿದಾರನ ಅಂಗಡಿಗೆ ಹೋಗಿ ಆತನ ಜೊತೆ ಜಗಳವಾಡಿ ಆತನ ವ್ಯಾಪಾರಕ್ಕೆ ಲುಕ್ಸಾನುಪಡಿಸಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ  427 ಸಹಕಲಂ 34** ರಡಿಯಲ್ಲಿ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ?

ಕೊನೆಯದಾಗಿ, ಅದೇ ದಿನ, ಅದೇ ಸ್ಥಳ ಹಾಗೂ ಅದೇ ಸಮಯದಲ್ಲಿ ಆರೋಪಿತರಾದ ನೀವು, ನಿಮ್ಮ ಸಮಾನ ಉದ್ದೇಶದಿಂದ ಫಿರ್ಯಾದುದಾರನಿಗೆ ಹಾಗೂ ಚಾಸಾ-4 ರಿಂದ 6 ರವರಿಗೆ ಇಲ್ಲಿದ್ದರೆ ನಿಮ್ಮನ್ನು ಸುಟ್ಟು ಹಾಕಿ ಬಿಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿ ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ 506 ಸಹ ಕಲಂ 34** ರಡಿಯಲ್ಲಿ ದಂಡನಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ?

ಆದ್ದರಿಂದ ಈ ಮೇಲೆ ಹೇಳಿದ ದೋಷಾರೋಪಣೆಯ ಬಗ್ಗೆ ಆರೋಪಿತರಾದ ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡಬೇಕಾಗಿ ನಿರ್ದೇಶಿಸುತ್ತೇನೆ.

(ಮೇಲಿನ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಾದ ಕನ್ನಡದಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ನೀಡಿರುವ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು .)

**ಧಾರವಾಡ** **ಸಹಿ/-**

**ದಿನಾಂಕಃ 03-06-2022** **(ಮಹೇಶ ಚಂದ್ರಕಾಂತ)**
**3 ನೇ ಹೆ ಹಿ ದಿ ನ್ಯಾಯಿಕ ದಂಡಾಧಿಕಾರಿಗಳವರ**
**ನ್ಯಾಯಾಲಯ, ಧಾರವಾಡ.**

## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ

**ಸಿಸಿ ನಂಃ 1788/2021**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

**-ವಿರುದ್ಧ-**

ಆರೋಪಿತಃ- 1) ವಾಸು ವೆಂಕರೆಡ್ಡಿಯವರ

**ಃ ಆಪಾದನೆಃ**

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?
ಉತ್ತರಃ ಹೌದು.

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ದಲ್ಲಿ ದಾಖಲಿಸಿಕೊಳ್ಳಲಾಯಿತು)

**ಧಾರವಾಡ.** ಸಹಿ/-
**ದಿನಾಂಕಃ 03-06-2022** **3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ., ಧಾರವಾಡ.**

**ಆರೋಪಿತನ ಸಹಿ**

## 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ

**ಸಿಸಿ ನಂಃ 1788/2021**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

**-ವಿರುದ್ಧ-**

ಆರೋಪಿತಃ- 2) ಶ್ರೀನಿವಾಸ ನಿಂಗರೆಡ್ಡಿ ಕಾಮರೆಡ್ಡಿ

**ಃ ಆಪಾದನೆಃ**

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?
ಉತ್ತರಃ ಹೌದು.

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ದಲ್ಲಿ ದಾಖಲಿಸಿಕೊಳ್ಳಲಾಯಿತು)

**ಧಾರವಾಡ.** ಸಹಿ/-
**ದಿನಾಂಕಃ 03-06-2022** **3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ., ಧಾರವಾಡ.**

**ಆರೋಪಿತನ ಸಹಿ**

## **3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿಜೆಎಂ., ನ್ಯಾಯಾಲಯ ಧಾರವಾಡ**

**ಸಿಸಿ ನಂಃ 1788/2021**

ಫಿರ್ಯಾದಿಃ- ಕರ್ನಾಟಕ ಸರ್ಕಾರದ ಪರವಾಗಿ
(ವಿದ್ಯಾಗಿರಿ ಪೋಲಿಸ್ ಠಾಣೆ)

**-ವಿರುದ್ಧ-**

ಆರೋಪಿತಃ- 3) ಸುನಿತಾ ಶ್ರೀನಿವಾಸ ಕಾಮರೆಡ್ಡಿ

**ಃ ಆಪಾದನೆಃ**

ಪ್ರಶ್ನೆಃ ಮೇಲೆ ಓದಿ ಹೇಳಿದ ಆರೋಪಣೆ ತಿಳಿಯಿತೇ?
ಉತ್ತರಃ ಹೌದು.

ಪ್ರಶ್ನೆಃ ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು.

(ಮೇಲಿನ ಉತ್ತರವನ್ನು ಆರೋಪಿತರ ಹೇಳಿಕೆಯಂತೆ ಯಥಾವತ್ತಾಗಿ ತೆರೆದ ನ್ಯಾ.ದಲ್ಲಿ ದಾಖಲಿಸಿಕೊಳ್ಳಲಾಯಿತು)

**ಧಾರವಾಡ.** **ಸಹಿ/-**
**ದಿನಾಂಕಃ 03-06-2022** **3 ನೇ ಹೆ ಹಿ ದಿ ನ್ಯಾಯಾಧೀಶರು ಹಾಗೂ ಸಿಜೆಎಂ., ಧಾರವಾಡ.**

**ಆರೋಪಿತನ ಸಹಿ**